ಶ್ರೀ ಎಚ್. ವಿ. ಕೌಜಲಗಿ.—ಇದರಲ್ಲಿ ಸರ್ಕಾರದವರು ಯಾವುದನ್ನೂ ಮುಚ್ಚುಮರೆ ಮಾಡಿಟ್ಟಿಲ್ಲ. ಅವರಿಗೆ ಇಂಥ ಹೆಚ್ಚಿನ ಮಾಹಿತಿ ಬೇಕಾದರೆ ಅದನ್ನು ಒದಗಿಸುತ್ತೇನೆ.

1-30 P.M.

ಶ್ರೀ ಎಸ್. ಶಿವಪ್ಪ.—ಜಿಲ್ಲಾವಾರು ಕ್ಷಾಮ ಪರಿಹಾರ ಕೆಲಸ ನಡೆದಿರುವುದು ಹೇಗಿದೆ ಎಂದರೆ, ಆಯಾ ಮಂತ್ರಿಗಳ ಜಿಲ್ಲೆಯೊಳಗೆ ಹೆಚ್ಚು ಮೊಬಲಗನ್ನು ಕೊಟ್ಟಿದ್ದಾರೆ. ಒಂದೊಂದು ಜಿಲ್ಲೆಗೆ ½ಲಕ್ಷ, ನಮ್ಮ ಜಿಲ್ಲೆಗೆ 11 ಲಕ್ಷ ಧಾರವಾಡ ಜಿಲ್ಲೆಗೆ 43 ಲಕ್ಷ ಹೀಗೆ ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳ ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆಂಬುದನ್ನು ತಾವು ನೋಡಿ.

ಶ್ರೀ ಎಚ್. ವಿ. ಕೌಜಲಗಿ.— ಮಾನ್ಯ ಶ್ರೀ ಶಿವಪ್ಪನವರ ಜಿಲ್ಲೆಯಲ್ಲಿ ಕೇವಲ ಎರಡು ಮೂರು ತಾಲ್ಲೂಕುಗಳಿಗೆ ಕ್ಷಾಮ ಎಫೆಕ್ಟ್ ಆಗಿದೆ. ಆದ್ದರಿಂದ ಅವರ ಜಿಲ್ಲೆಗೆ ಹೆಚ್ಚು ಖರ್ಚಾಗಿದೆಯೆಂದು ನಾನು ಸಿದ್ಧಮಾಡಿಕೊಡುತ್ತೇನೆ.

Development of Air Strip

360. **Sri M. NAGAPPA** (Raichur).—

Will the Minister for Public Works be pleased to state :—

whether there is any scheme before Government to recommend to the Government of India to develop the Air Strip at Yermaras Village, Raichur Taluk as an Aerodrome in view of the fact that the Raichur District is declared as Intensive Agriculture District ?

Sri B. V. MAGAVI (Deputy Minister for Public Works).—

No.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ಇಲ್ಲವೆಂದು ಹೇಳಿದ್ದೀರಿ. ಇದರಿಂದ ಇದನ್ನು ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಮನಸ್ಸು ಇಲ್ಲವೋ ಅಥವಾ ಇದನ್ನು ಶಿಫಾರಸು ಮಾಡಿದರೆ ಕೇಂದ್ರ ಸರ್ಕಾರದವರು ಇವನ್ನು ಪರ್ಯಾಲೋಚಿಸುವುದಿಲ್ಲವೆಂಬ ಭಾವನೆಯೇ ?

† ಶ್ರೀ ಬಿ. ವಿ. ಮಾಗಾವಿ.—ಇದರ ಬಗ್ಗೆ ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಷನ್ ಅವರು ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿದ್ದಾರೆ. ಅದು 6 ಲಕ್ಷ 87 ಸಾವಿರ ರೂಪಾಯಿಗಳಾಗುತ್ತದೆಂದು ತಿಳಿಸಿದ್ದಾರೆ. ಆದರೆ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯರ್ ಆಗುವುದಿಲ್ಲವೆಂದು ಅವರು ಅದನ್ನು ತಟಸ್ಥಮಾಡುತ್ತಿದ್ದಾರೆ.

ಶ್ರೀ ಎಂ. ನಾಗಪ್ಪ.—ತಮ್ಮ ಅವಗಾಹನೆಗೆ ಈ ಒಂದು ವಿಷಯ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಅವರು ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯರ್ ಇಲ್ಲವೆಂದು ಅದನ್ನು ಅಭಿವೃದ್ಧಿಮಾಡದಿದ್ದರೆ, ಡೈಲ ಹಿಂದೂ ಅವರು ಅವರ ಪತ್ರಿಕೆಗಳನ್ನು ಬೆಂಗಳೂರಿನಿಂದ ರಾಯಚೂರು, ಹೈದರಾಬಾದ್‌ನಿಂದ ರಾಯಚೂರು ಬೆಂಗಳೂರು ರನ್‌ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದಕಾರಣ ಅದನ್ನು ಏರೋಡ್ರೊಂ ಆಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ವಿ. ಮಾಗಾವಿ.—ಆ ಒಂದು ಪತ್ರಿಕೆ ಸರ್ವಿಸ್‌ಗೋಸ್ಕರ ಅದನ್ನು ಮಾಡಬೇಕೆಂದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಪ್ಯಾಸೆಂಜರ್ಸ್ ಪೊಟೆನ್‌ಷಿಯರ್ ಇರಬೇಕಾಗಿದೆ. ಐ. ಎ. ಸಿ. ಯವರು ರೆಗ್ಯುಲರ್ ಸರ್ವಿಸ್ ಇಟ್ಟಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀ ಬಾಪೂಗೌಡ.— ರಾಯಚೂರು ಜಿಲ್ಲೆಯಲ್ಲಿ ಒಂದು ಏರ್‌ಸ್ಟ್ರಿಪ್ ಮಾಡುವುದರಿಂದ ಬದರ್ ಮತ್ತು ಗುಲ್ಬರ್ಗ ಜಿಲ್ಲೆಯವರಿಗೆ ಅನುಕೂಲವಾಗುತ್ತದಲ್ಲವೇ ?

ಶ್ರೀ ಬಿ. ವಿ. ಮಾಗಾವಿ.— ಅದು ಮಾನ್ಯ ಸದಸ್ಯರ ನಲಹೆ.

ಶ್ರೀ ವಿ. ಎನ್. ಪಾಟೀಲ್.—ರಾಯಚೂರ್ ಜಿಲ್ಲೆಯಲ್ಲಿ ಜಿನ್ನಿಂಗ್ ಫ್ಯಾಕ್ಟರಿ ಇದೆ. ಗಂಗಾವತಿ ಮತ್ತು ಸಿಂಧನೂರ್ ಬೆಲ್ಟ್ ಏರಿಯಾ ಇದೆ. ಅಮೆರಿಕಾ ಪೀಸ್ ಕೋರ್ ಸೇಕಡ 70ರಷ್ಟು ಇದ್ದಾರೆ. ಹಟ್ಟಿ ಗೋಲ್ಡ್ ಮೈನ್ಸ್ ಇದೆ. ಇವೆಲ್ಲವನ್ನೂ ಅಭಿವೃದ್ಧಿ ಮಾಡಬೇಕಾದರೆ ಅಲ್ಲಿ ಒಂದು ಏರ್ ಸ್ಟ್ರಿಪ್ ಮಾಡಬೇಕಲ್ಲವೇ ?

ಶ್ರೀ ಬಿ. ವಿ. ಮಾಗಾವಿ.—ಮಂಗಳೂರು—ಬೆಳಗಾಂನಲ್ಲಿರತಕ್ಕ ಏರ್ ಸ್ಟ್ರಿಪ್ ಕೂಡ ಅಷ್ಟಾಗಿ ಸಾಕಷ್ಟು ಫಲದಾಯಕವಾಗಿಲ್ಲ. ಅಂದಮೇಲೆ ಹೊಸದಾಗಿ ಏರ್‌ಸ್ಟ್ರಿಪ್‌ಗಳನ್ನು ಮಾಡುವುದಕ್ಕೆ ಅವರ ಒಪ್ಪಿಗೆ ಇಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಸಂಗನಗೌಡ.—ಇವತ್ತು ಸಂಯುಕ್ತ ಕರ್ನಾಟಕದಲ್ಲಿ ಹಾನನ ಜಿಲ್ಲೆಯಲ್ಲಿ ಒಂದು ಏರ್‌ಸ್ಟ್ರಿಪ್ ಮಾಡುವ ವಿಚಾರ ಬಂದಿದೆ. ಅಂದಮೇಲೆ ರಾಯಚೂರು ಜಿಲ್ಲೆಯಲ್ಲಿ ಬೇಕಾದಷ್ಟು ಅನುಕೂಲತೆಗಳು ಇರುವುದರಿಂದ ಅಲ್ಲಿ ಒಂದು ಏರೋಡ್ರೋಂ ಮಾಡುವುದಕ್ಕೆ ಇರುವ ಆಂತವೇನು ?

ಶ್ರೀ ಬಿ. ವಿ. ಮಾಗಾವಿ.—ಸದಸ್ಯರ ಇಚ್ಛೆಯನ್ನು ಕೇಂದ್ರಸರ್ಕಾರದ ಗಮನಕ್ಕೆ ತರಬಹುದು. ಕೊನೆಯದಾಗಿ ಅದನ್ನು ಒಪ್ಪಿಕೊಳ್ಳುವುದು, ಬಿಡುವುದು ಕೇಂದ್ರಸರ್ಕಾರಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಎಸ್. ಸದಾಶಿವಪ್ಪ ಪಾಟೀಲ್.—ಇಲ್ಲಿ ಭಾರತ ಸರ್ಕಾರದವರಿಗೆ ಶಿಫಾರಸು ಮಾಡಲು ಸರ್ಕಾರದವರಲ್ಲಿ ಯೋಜನೆ ಏನಾದರೂ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾಗಿದೆ ಏಕೆಂದರೆ, ಹಿಂದೆ ದಿವಂಗತ ನೆಹರೂರವರು ಒಮ್ಮೆ ದೆಹಲಿಗೆ ಹೋಗುವಾಗ ವಿಮಾನಕ್ಕೆ ಬೆಂಕಿ ಹತ್ತಿದಾಗ ಅದೇ ವಿಮಾನ ನಿರ್ವಾಣ ಅದನ್ನು ಉಳಿಸಿದ್ದು ಎಂದು ಹೇಳಬಹುದು. ಆದಕಾರಣದಿಂದ ಇದನ್ನು ಏನಾದರೂ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ವಿ. ಮಾಗಾವಿ.— ಜವಹರಲಾಲ್ ನೆಹರೂ ಇಳಿದ ಬಗ್ಗೆ ರಿಕಾರ್ಡು ಮೇರೆ ಯಾವುದೂ ಮಾಹಿತಿ ಇಲ್ಲ. ನಾನೂ ಕೇಳಿದ್ದೇನೆ. ಅಂದ ಮಾತ್ರಕ್ಕೆ ಅದನ್ನು ಮಾಡಬೇಕೆಂದು ಹೇಳಿದರೆ ಕಷ್ಟವಾಗುತ್ತದೆ.

Sri THIRUMALADEVARAYA.— May I know whether any survey was conducted at Ginigere for an air strip ?

ಶ್ರೀ ಬಿ. ವಿ. ಮಾಗಾವಿ.—ಅನೇಕ ಕಡೆಗಳಲ್ಲಿ ಅವುಗಳನ್ನು ಇನ್‌ವೆಸ್ಟಿಗೇಟ್ ಮಾಡಿ ಎಸ್ಟಿಮೇಟ್ ಕೂಡ ಮಾಡಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕದ ಕಾರಣ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ.

Mr. SPEAKER:—Sri C. M. Churchihal Math may put Q. No. 373 on behalf of Sri S. R. Bommai.

Acquisition proceedings Pending in Kundgol Taluk

373. Sri C. M. CHURCHIHAL MATH (Mundargi) [On behal of SRI S. R. BOMMAI (Kundgol)].—

Will the Minister for Revenue be pleased to state :—

(*a*) the number of acquisition proceedings for providing village sites pending in Kundgol Taluk (villagewise information may be furnished) ;